O.S.No.113/2014

DW-1

ಇಂದು ದಿನಾಂಕಃ19-01-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ. ಆಯ್ ಸಿ ಬಿ ವಕೀಲರಿಂದ.

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. 1 ನೇ ವಾದಿ ನನ್ನ 2 ನೇ ತಾಯಿ ಆಗಬೇಕು. 2 ಮತ್ತು 3 ನೇ ವಾದಿಯರು 1 ನೇ ವಾದಿಯ ಮಕ್ಕಳು. ನನ್ನ ತಾಯಿ ಮಹಾದೇವಿ ಇವರು 1991 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಾಯಿ ತೀರಿಕೊಂಡ ನಂತರ 1996 ರಲ್ಲಿ ನಮ್ಮ ತಂದೆಯವರು 1 ನೇ ವಾದಿಯೊಂದಿಗೆ ಮದುವೆ ಮಾಡಿಕೊಂಡಿರುತ್ತಾರೆ. 1 ನೇ ವಾದಿಯ ಮದುವೆಯು ನಮ್ಮ ತಂದೆಯವರೊಂದಿಗೆ 1996 ರಲ್ಲಿ ಮದುವೆ ಆರಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲಾ. ಮತ್ತು ಆ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದು ಅವರು ಕೈಫಿಯತ್‌ನಲ್ಲಿ ಬರೆದಿರುವ ಬಗ್ಗೆ ಗೊತ್ತಿಲ್ಲಾ. ನನ್ನ ಮುಖ್ಯ ವಿಚಾರಣೆಯಲ್ಲೂ ಸದರಿ ಸಂಗತಿಯನ್ನು ಬರೆಸಿರುವುದಿಲ್ಲಾ.

ನಮ್ಮ ತಂದೆ ಮತ್ತು ನಮ್ಮ ಅಜ್ಜ, ಕಾಕಾರವರು ಏಕತ್ರ ಕುಟುಂಬದಲ್ಲಿ ವಾಸವಾಗಿದ್ದು ಒಕ್ಕಲುತನವನ್ನೇ ಮಾಡುತ್ತಾ ಬಂದಿರುತ್ತೇವೆ. ಮದಡಿಕಂಡಿಯಲ್ಲಿರುವ ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನನ್ನ ಅಜ್ಜನವರ ಹೆಸರಿನಲ್ಲಿ ತೇರದಾಳ, ಮುಗಳಖೋಡನಲ್ಲಿ ಜಮೀನುಗಳಿದ್ದವು.

ಪ್ರಶ್ನೆಃ ಮದರಕಂಡಿ ಜಮೀನನ್ನು ತೆಗೆದುಕೊಳ್ಳಲು ನಮ್ಮ ಅಜ್ಜನವರು ಪರಪ್ಪ ಮತ್ತು ನಮ್ಮ ಕಾಕಾ ಮತ್ತು ನಮ್ಮ ತಂದೆಯವರು ಕೂಡಿ ದುಡಿದ ಆದಾಯದಿಂದ ಸದರಿ ಜಮೀನನ್ನು ಖರೀದಿ ಮಾಡಿರುತ್ತಾರೆ ಅಲ್ಲವೆ ?

ಉತ್ತರಃ ಸರಿ

ಆ ಕಾಲಕ್ಕೆ ನಮ್ಮ ಅಜ್ಜನವರಿಗೆ ಜಮೀನಿನ ಉತ್ಪನ್ನ ಅಷ್ಟೇ ಇತ್ತು ಎಂದರೆ ಸರಿ. 1995 ರಲ್ಲಿ ನಮ್ಮ ಅಜ್ಜನವರು ಎಲ್ಲಾ ಜಮೀನುಗಳನ್ನು ಏಕತ್ರ ಕುಟುಂಬದ ಮೂಲಕ ವಾಟ್ನಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಅಜ್ಜನವರುಏಕತ್ರ ಕುಟುಂಬದ ವಾಟ್ನಿ ಮಾಡುವಾಗ ನಾವು ಚಿಕ್ಕವರಿದ್ದೇವು ಎಂದರೆ ಸರಿ. ನಾವು ಚಿಕ್ಕವರು ಇರುವುದರಿಂದ ನಮ್ಮ ಅಜ್ಜಿ ಮತ್ತು ಕಾಕಾರವರು ಸೇರಿ ಒಟ್ಟಿಗೆ ಒಕ್ಕಲುತನ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಅಜ್ಜ ತೀರಿಕೊಳ್ಳುವವರೆಗೂ ಒಕ್ಕಲತುನ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1995 ರಲ್ಲಿ ನಮ್ಮ ಅಜ್ಜನವರು ಪಾಲು ವಾಟ್ನಿ ಮಾಡಿದಾಗ 1 ನೇ ವಾದಿ ಜೀವಂತ ಇದ್ದರು ಮತ್ತು ಆಕೆಗೆ 3 ಜನ ಮಕ್ಕಳಿದ್ದರು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಅವರ ಮದುವೆ ಆಗಿರಲಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ತಾಯಿಯವರು ತೀರಿಕೊಂಡು ಒಂದು ವರ್ಷದ ಒಳಗಡೆ ನಮ್ಮ ತಂದೆಯವರು 1 ನೇ ವಾದಿಯನ್ನು ಮದುವೆ ಆಗಿದ್ದರು ಎಂದರೆ ಸಾಕ್ಷಿಯು 1 ನೇ ವಾದಿಯನ್ನು ಮದುವೆ ಮಾಡಿಕೊಂಡಿಲ್ಲ ಎಂದು ನುಡಿದಿರುತ್ತಾರೆ. 1 ನೇ ವಾದಿಯು ಮದರಕಂಡಿಗೆ ಸಂಬಂಧಪಟ್ಟ ದಾವಾ ಆಸ್ತಿಯ ಮೇಲೆ ದಾವೆ ಹೂಡಿರುತ್ತಾರೆ ದಾವಾ ಜಮೀನಿಗೆ ಸಂಬಂಧಪಟ್ಟಂತೆ ತೇರದಾಳದಲ್ಲಿ ಆರ್ ಟಿ ಎಸ್ ವ್ಯಾಜ್ಯ ನಡೆದಿತ್ತು.3 ನೇ ಪ್ರತಿವಾದಿಯು ದಿ17-5-2013 ರಂದು ನನಗೆ ವಾರಸಾ ಮತ್ತು ಒಪ್ಪಿ ಗೆ ಬರೆದುಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ವಾರಸಾ, ವ ಒಪ್ಪಿ ಗೆ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿಃ11 ಎಂದು ಗುರುತಿಸಲಾಯಿತು.ಸದರಿ ಒಪ್ಪಿಗೆ ಪತ್ರಕ್ಕೆ 4 ನೇ ಪ್ರತಿವಾದಿಯ ಅಣ್ಣನವರು ಸಹಿ ಹಾಕಿರುತ್ತಾರೆ ಅವರ ಸಹಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸದರಿ ನಿಪಿಃ11 ನ್ನು ಬರೆಯುವಾಗ ನನ್ನ ತಂಗಿಗೆ ವಾದಿಯರು ಇದ್ದ ಬಗ್ಗೆ ಗೊತ್ತಿತ್ತು. ಆ ಬಗ್ಗೆ ನನಗೆ ಮತ್ತು 4 ನೇ ಪ್ರತಿವಾದಿ ಅಣ್ಣನಿಗೂ ಸಹ ನನ್ನ 2 ನೇ ತಾಯಿ ಮತ್ತು ಅವರ ಮಕ್ಕಳಿದ್ದ ಬಗ್ಗೆ ಗೊತ್ತಿತ್ತು. ದಾವಾ ಜಮೀನಿನ ಮೇಲೆ ಅವಳ ಹಕ್ಕು ಇರಲಿಲ್ಲ. ನಮ್ಮ ಕುಟುಂಬದಲ್ಲಿರುವ ಆಸ್ತಿಯಲ್ಲಿ ವಾದಿಯರಿಗೆ ಯಾವ ಊರಿನಲ್ಲಿ ಬರುವ ಆಸ್ತಿಗೆ ಹಕ್ಕು ಇತ್ತು ಎಂದರೆ ಸಾಕ್ಷಿಯು ನಮ್ಮ ಅಜ್ಜ ಅವರಿಗೆ ಹಕ್ಕು ಇದ್ದ ಬಗ್ಗೆ ನನಗೆ ಹೇಳಿಲ್ಲ ಎಂದು ನುಡಿದಿರುತ್ತಾರೆ.ನಿಪಿಃ11 ಬರೆಯುವಾಗ ಕುಟುಂಬದ ಆಸ್ತಿಯ ಬಗ್ಗೆ ತಂಟೆ ತಕರಾರು ಇರಲಿಲ್ಲಾ. ನಂತರ 1 ನೇ ವಾದಿಯು ದಾವಾ ಆಸ್ತಿಯನ್ನು ನಮಂ ಹೆಸರಿಗೆ ಹಚ್ಚುವಾಗ ತಹಶೀಲ್ದಾರ ಕಚೇರಿಯಲ್ಲಿ ತಕರಾರು ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ತಕರಾರು ಅರ್ಜಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ12 ಎಂದು ಗುರುತಿಸಲಾಯಿತು. ಮದರಕಂಡಿಯ ಹಿರಿಯರು ಜಮೀನಿನ ಸಂಬಂಧವಾಗಿ ನಮ್ಮ ನಮಂಲ್ಲಿ ತಕರಾರುಬೇಡ ಆಪಸಾತ್ ಮಾಡಿಕೊಳ್ಳಬೇಕೆಂದು ನಮಗೂ ಹಾಗೂ ಅಂಬವ್ವರಿಗೆ ಬುದ್ಧಿ ಹೇಳಿದ್ದರು ಎಂದರೆ ಸರಿ. ಹಿರಿಯರು ಹೇಳಿದ್ದರಿಂದ ದಿಃ19-7-2013 ರಲ್ಲಿ ಸರ್ವೇ ನಂ.144/3ಎ ನೇದ್ದರಲ್ಲಿ 25 ಗುಂಟೆ ಜಮೀನನ್ನು ಬಿಟ್ಟು ಕೊಟ್ಟಿದ್ದೇವು ಎಂದರೆ ಸರಿ ಅಲ್ಲ. ಆ ಹಿರಿಯರ ಮುಂದೆ ಆದ ಒಪ್ಪಿಗೆ ಪತ್ರಕ್ಕೆ ಹಟ್ಟಿ ಕಂಕನವಾಡಿ ಜೊಂಗನವರ, ಕಡಿವಾಳ ಇವರುಗಳು ಸಹಿ ಹಾಕಿದ್ದರು ಎಂದರೆ ಸಾಕ್ಷಿಯು ಖಾಲಿ ಬಾಂಡಿನ ಮೇಲೆ ನನ್ನ ಸಹಿ

ತೆಗೆದುಕೊಂಡಿರುತ್ತಾರೆ. ನಾನು ಇಂಗ್ಲೀಷಿನಲ್ಲಿ ಸಹಿ ಮಾಡುತ್ತೇನೆ. ಸಾಕ್ಷಿಗೆ ಒಪ್ಪಿಗೆ ಪತ್ರವನ್ನು ತೋರಿಸಿ ಅದರಲ್ಲಿರುವ ಸಹಿಗಳನ್ನು ತೋರಿಸಿದಾಗ ಸದರಿ ಸಹಿಗಳನ್ನು ತನ್ನದೆಂದು ಒಪ್ಪಿದ್ದು ಅದನ್ನು ನಿಪಿಃ13 ಎಂದು ಸಾಕ್ಷಿಯ ಸಹಿಗಳನ್ನು ನಿಪಿಃ13 ಎ ಮತ್ತು ನಿಪಿಃ13 ಬಿ ಎಂದು ಗುರುತಿಸಲಾಯಿತು. ಅಂಬವ್ವ ಆರ್ ಟಿ ಸಿ ಯ ವ್ಯಾಜ್ಯವನ್ನು ಹಿಂತೆಗೆದುಕೊಂಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಇದ್ದೇನು. ಸದರಿ ಅರ್ಜಿಯನ್ನು ನಿಪಿಃ14 ಎಂದು ಗುರುತಿಸಲಾಯಿತು. ದಿಃ2-9-2013 ರಂದು ತೇರದಾಳ ತಹಶೀಲ್ದಾರ ಇವರು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶವನ್ನು ಸಾಕ್ಷಿಯು ನೋಡಿ ಒಪ್ಪಿದ್ದು ಅದನ್ನು ನಿಪಿಃ15 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಹಾಗೂ ಜೆ ಎಂ ಎಫ್ ಸಿ ಜಮಖಂಡಿ.

ಸಾಕ್ಷಿಯ ಸಹಿ,